ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ
ದಿನಾಂಕ : DATE: 23/3/2021

## ರಾಜ್ಯ ಸಂಪುಟ ಸಭೆ ನಿರ್ಣಯ । ಸುಪ್ರೀಂಕೋರ್ಟ್‌ಗೆ ಪ್ರಮಾಣಪತ್ರ

# ಮೀಸಲು ಏರಿಕೆಗೆ ಸಹಮತ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು 23-3-21

ಮೀಸಲಾತಿ ಕುರಿತು ವಿವಿಧ ಸಮುದಾಯಗಳಿಂದ ಬರುತ್ತಿರುವ ಬೇಡಿಕೆ ಬಗ್ಗೆ ಪರಾಮರ್ಶಿಸಲು ಈಗಾಗಲೇ ಉನ್ನತ ಮಟ್ಟದ ಸಮಿತಿ ರಚಿಸಿರುವ ರಾಜ್ಯ ಸರ್ಕಾರ, ಈಗ ಮೀಸಲು ಮಿತಿ ಏರಿಸಲು ಸಹಮತ ವ್ಯಕ್ತಪಡಿಸಿದೆ. ಸೋಮವಾರ ಸಂಪುಟ ಸಭೆಯಲ್ಲಿ ಈ ಬಗ್ಗೆ ಚರ್ಚೆ ನಡೆದಿದ್ದು, ಮಿತಿ ಹೆಚ್ಚಳಕ್ಕೆ ಅಭ್ಯಂತರವಿಲ್ಲ ಎಂಬ ತೀರ್ಮಾನಕ್ಕೆ ಸರ್ಕಾರ ಬಂದಿದೆ.

ಸರ್ವೋಚ್ಚ ನ್ಯಾಯಾಲಯದಲ್ಲಿ ಮರಾಠಿ ಮೀಸಲಾತಿ ಕುರಿತು ನಡೆಯುತ್ತಿರುವ ಪ್ರಕರಣವೊಂದರಲ್ಲಿ ನ್ಯಾಯಪೀಠ ಎಲ್ಲ ರಾಜ್ಯಗಳಿಂದ ಅಭಿಪ್ರಾಯ ಕೇಳಿದ್ದು, ಕರ್ನಾಟಕ ತನ್ನ ನಿಲುವು ವ್ಯಕ್ತಪಡಿಸಿದೆ. 'ಈಗಿರುವ ಮೀಸಲಾತಿ ಪ್ರಮಾಣ ಏರಿಕೆ ಮಾಡಲೇಬೇಕಾದ ಅನಿವಾರ್ಯತೆ ಇದೆ. ಜನಸಂಖ್ಯೆ ಗಣನೀಯವಾಗಿ ಏರಿಕೆಯಾಗಿದೆ. ಬಹುತೇಕ ಹಿಂದುಳಿದ ಸಮುದಾಯಗಳು ಮೀಸಲಾತಿಗೆ ಬೇಡಿಕೆ ಇಟ್ಟಿವೆ. ಬೇಡಿಕೆಗೆ ಪೂರಕವಾಗಿ ತೀರ್ಮಾನ ಕೈಗೊಳ್ಳಬೇಕಾದರೆ ಮೀಸಲಾತಿ ಪ್ರಮಾಣ ಏರಿಕೆ ಅಗತ್ಯ. ಈ ತೀರ್ಮಾನ ಐತಿಹಾಸಿಕವಾಗಿ ದಾಖಲಾಗಲಿದೆ' ಎಂದು ಸಂಪುಟ ಸಭೆಯಲ್ಲಿ ಅಭಿಪ್ರಾಯ ವ್ಯಕ್ತವಾಯಿತು. ಸಂಪುಟ ಸಭೆ ಬಳಿಕ ರಾಜ್ಯದ ಅಡ್ವೋಕೇಟ್ ಜನರಲ್‌ಗೆ ಸರ್ಕಾರ ನಿರ್ಣಯ ತಲುಪಿಸಿದ್ದು, ಅವರು ಪ್ರಮಾಣಪತ್ರ ರೂಪದಲ್ಲಿ ಸುಪ್ರಿಂಕೋರ್ಟ್‌ಗೆ ಸಲ್ಲಿಸಿದ್ದಾರೆ. ●ಪುಟ 4

### ಬೇಡಿಕೆ ಒಂದೆರಡಲ್ಲ...

**ಪಂಚಮಸಾಲಿ ಲಿಂಗಾಯತ ಸಮುದಾಯ 2Aನಲ್ಲಿ ಸೇರಿಸಬೇಕೆಂದು ಹೋರಾಟ ನಡೆಸಿದೆ. ಹೋರಾಟದ ಕಾವು ಬೂದಿಮುಚ್ಚಿದ ಕೆಂಡದಂತಿದೆ. ನ್ಯಾ. ನಾಗಮೋಹನ್ ದಾಸ್ ಎಸ್ಸಿ, ಎಸ್ಟಿ ಸಮುದಾಯಕ್ಕೆ ಮೀಸಲು ಹೆಚ್ಚಿಸುವ ಕುರಿತು ವರದಿ ಕೊಟ್ಟಿದ್ದಾರೆ. ಹಾಲಮತ ಸಮುದಾಯ ಎಸ್ಟಿಗೆ ಸೇರಿಸುವಂತೆ ಒತ್ತಾಯ ಹಾಕಿದೆ. ವಾಲ್ಮೀಕಿ ಸಮುದಾಯ ಮೀಸಲು ಹೆಚ್ಚಳಕ್ಕೆ ಬೇಡಿಕೆ ಇಟ್ಟಿದ್ದರೆ, ಈಡಿಗರು 2ಎ ಪ್ರಮಾಣ ಹೆಚ್ಚಳಕ್ಕೆ ಕೋರಿದ್ದಾರೆ. ಸಣ್ಣ ಸಣ್ಣ ಸಮಾಜಗಳು ಬೇಡಿಕೆ ಮುಂದಿಟ್ಟಿವೆ.**



### ಸರ್ಕಾರಕ್ಕೇನು ಲಾಭ?

**01** ವಿವಿಧ ಸಮುದಾಯಗಳು ಮೀಸಲಾತಿಗಾಗಿ ಒತ್ತಡ ಹೇರುತ್ತಿರುವ ಹಿನ್ನೆಲೆಯಲ್ಲಿ ಇದನ್ನು ಈಡೇರಿಸಲು ಮೀಸಲು ಪ್ರಮಾಣ ಹೆಚ್ಚಳ ಅನಿವಾರ್ಯ.

**02** ಒಂದು ವೇಳೆ ಈ ವಿಷಯವನ್ನು ಮುಂದೂಡಿದರೂ ಆಡಳಿತ ಪಕ್ಷ ಚುನಾವಣೆಯಲ್ಲಿ ಪರಿಣಾಮ ಎದುರಿಸಬೇಕಾಗುತ್ತದೆ. ಬೇಡಿಕೆ ಈಡೇರಿಸಿದಲ್ಲಿ ಮತ ಗಳಿಕೆಗೆ ಅನುಕೂಲ.

**03** ಅನೇಕ ಪ್ರಮುಖ ಸಮಾಜಗಳೇ ಬೇಡಿಕೆ ಮುಂದಿಟ್ಟಿವೆ. ಅವುಗಳನ್ನು ಸರ್ಕಾರ ಈಡೇರಿಸಿದಲ್ಲಿ ಐತಿಹಾಸಿಕ ತೀರ್ಮಾನ ಮಾಡಿದ ಕೀರ್ತಿ ಬಹುಕಾಲ ಉಳಿಯಲಿದೆ.

### ರಾಜ್ಯದಲ್ಲಿ ಎಷ್ಟಿದೆ ಮೀಸಲು?

1. ಪರಿಶಿಷ್ಟ ಜಾತಿ- ಶೇ.15
(ಪ್ರಮುಖ ಜಾತಿಗಳು: ಮಾದಿಗ, ಹೊಲೆಯ, ಬೋವಿ, ಲಂಬಾಣಿ, ಸಮಗಾರ, ಕೊರಚ, ಕೊರಮ ಸೇರಿ 101 ಸ್ಪೃಶ್ಯ-ಅಸ್ಪೃಶ್ಯ ಜಾತಿ.
2. ಪರಿಶಿಷ್ಟ ಪಂಗಡ- ಶೇ.3
(ವಾಲ್ಮೀಕಿ, ನಾಯಕ, ಆದಿವಾಸಿ ಸೇರಿ 50 ಜಾತಿ)
3. ಹಿಂದುಳಿದ ವರ್ಗ ಕೆಟಗರಿ-1- ಶೇ.4
(ಉಪ್ಪಾರರು, ಗೊಲ್ಲರು, ಪಿಂಜಾರ ಸೇರಿ 95 ಜಾತಿ)
4. ಒಬಿಸಿ ಕೆಟಗರಿ 2ಎ- ಶೇ.15 (ಕುರುಬ, ಈಡಿಗ, ತಿಗಳ (ವಹ್ನಿಕುಲ ಕ್ಷತ್ರಿಯ), ಮಡಿವಾಳ, ಕುಂಬಾರ, ದೇವಾಂಗ, ವಿಶ್ವಕರ್ಮ, ನಾಮಧಾರಿ, ದೇವಾಡಿಗ, ಕ್ಷತ್ರಿಯ, ದರ್ಜಿ, ಬಿಲ್ಲವ, ಪೂಜಾರಿ, ದೀವರ, ಕಂಚುಗಾರ, ನಾಡವ, ಸವಿತಾ ಸಮಾಜ ಸೇರಿ 102 ಜಾತಿ)
5. ಒಬಿಸಿ ಕೆಟಗರಿ 2ಬಿ- ಶೇ.4 (ಮುಸ್ಲಿಂ)
6. ಒಬಿಸಿ ಕೆಟಗರಿ 3ಎ- ಶೇ.4
(ಒಕ್ಕಲಿಗ, ಕೊಡವ, ಬಲಿಜ, ರೆಡ್ಡಿ ಮತ್ತಿತರ)
7. ಕೆಟಗರಿ 3(ಬಿ)- ಶೇ.5
(ವೀರಶೈವ ಲಿಂಗಾಯತ, ಮರಾಠ, ಕ್ರಿಶ್ಚಿಯನ್, ಜೈನ)

### ಮಿತಿ ಏರಿಕೆ ಅನಿವಾರ್ಯವೇ?

ಜನಸಂಖ್ಯೆಗೆ ಅನುಗುಣವಾಗಿ ಮೀಸಲು ನೀಡುತ್ತಿಲ್ಲ ಈ ಕಾರಣಕ್ಕೆ ಮೀಸಲು ಪರಿಷ್ಕರಣೆಯನ್ನು ಒಪ್ಪುವುದಿಲ್ಲ ಎನ್ನುತ್ತಲೇ ಬಂದಿದ್ದ ಸುಪ್ರಿಂಕೋರ್ಟ್, ಇದೀಗ ತನ್ನ ನಿಲುವನ್ನು ಸಡಿಲಿಸಿದೆ. ಎಲ್ಲಾ ರಾಜ್ಯಗಳಿಂದ ಅಭಿಪ್ರಾಯ ಸಂಗ್ರಹಿಸಿದ ಬಳಿಕ ಮೀಸಲು ಪ್ರಮಾಣ ಹೆಚ್ಚಳಕ್ಕೆ ಷರತ್ತು ಬದ್ಧ ಅನುಮತಿ ನೀಡಲು ಅವಕಾಶ ಸಿಗಬಹುದೆಂಬ ವಿಶ್ಲೇಷಣೆಗಳಿವೆ. ಮೀಸಲು ಪ್ರಮಾಣದ ಗರಿಷ್ಠ ಮಿತಿಯನ್ನು ನಿಗದಿಗೊಳಿಸುವ ಸಾಧ್ಯತೆ ಹೆಚ್ಚಿದೆ. ನೆರೆಯ ತಮಿಳುನಾಡಿನಲ್ಲೂ ಇದು ದೊಡ್ಡ ವಿವಾದದ ವಿಷಯವಾಗಿತ್ತು. ಅಲ್ಲಿನ ಸರ್ಕಾರ 1921ರಿಂದಲೂ ದಲಿತರು ಮತ್ತು ಹಿಂದುಳಿದ ವರ್ಗದ ಜನಸಂಖ್ಯೆ ಶೇ.87ರಷ್ಟಿದೆ ಎಂಬುದಕ್ಕೆ ದಾಖಲೆ ಸೃಷ್ಟಿಸಿ, ಮೀಸಲು ನೀಡುವುದಕ್ಕಾಗಿ ಸಂವಿಧಾನದ 9ನೇ ಶೆಡ್ಯೂಲ್‌ಗೆ ತಿದ್ದುಪಡಿ ಮಾಡಿಸಿಕೊಂಡಿದೆ. ಕರ್ನಾಟಕದಲ್ಲಿ ಕೂಡ ಪ್ರಮಾಣ ಹೆಚ್ಚಳ ಅನಿವಾರ್ಯ ಎಂಬ ಸ್ಥಿತಿ ಇದೆ.

# ಮೀಸಲು ಏರಿಕೆಗೆ ಸಹಮತ

ಮೊದಲನೇ ಪುಟದಿಂದ... ವಿ.ವಾ. 2.3-3-2

**ಏನಿದು ಮೀಸಲಾತಿ. ಪ್ರಕರಣ?:** ಉದ್ಯೋಗ ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಹಿಂದುಳಿದ ವರ್ಗಗಳಿಗೆ ನೀಡಲಾಗುವ ಮೀಸಲಾತಿ ಪ್ರಮಾಣ ಶೇ. 50 ಮೀರಬಾರದು ಎಂದು 1992ರಲ್ಲಿ ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು ನೀಡಿತ್ತು. ಆದರೆ ಮಹಾರಾಷ್ಟ್ರ ಸರ್ಕಾರ, ಮರಾಠರಿಗೆ ಶೇ. 16 ಮೀಸಲಾತಿ ನಿಗದಿ ಮಾಡಿ ಕಾಯ್ದೆಗೆ ತಿದ್ದುಪಡಿ ತಂದಿತ್ತು. ಇದರ ವಿರುದ್ಧ ಬಾಂಬೆ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಕೆಯಾಗಿತ್ತು. ಮೀಸಲಾತಿ ನೀಡಿಕೆಯನ್ನು ಎತ್ತಿ ಹಿಡಿದ ಬಾಂಬೆ ಹೈಕೋರ್ಟ್, ಮರಾಠರಿಗೆ ಶಿಕ್ಷಣ ಕ್ಷೇತ್ರದಲ್ಲಿ ಶೇ. 12 ಹಾಗೂ ಉದ್ಯೋಗದಲ್ಲಿ ಶೇ. 13 ಮೀಸಲಾತಿ ಒದಗಿಸುವಂತೆ ಆದೇಶ ನೀಡಿತ್ತು. ಈ ಆದೇಶದಿಂದ ಮೀಸಲಾತಿ ಪ್ರಮಾಣ ಶೇ. 50ಕ್ಕಿಂತ ಅಧಿಕವಾಗುತ್ತದೆ. ಇದು ಸುಪ್ರೀಂಕೋರ್ಟ್ ಆದೇಶದ ಉಲ್ಲಂಘನೆ ಎಂದು ಆರೋಪಿಸಿ, ಸರ್ವೋಚ್ಚ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಕೆಯಾಗಿತ್ತು.

'ಈ ವಿಚಾರ ಕೇವಲ ಮರಾಠರಿಗೆ ಸಂಬಂಧಿಸಿದ್ದಲ್ಲ. ಮೀಸಲಾತಿ ಪ್ರಮಾಣ ಎಲ್ಲ ರಾಜ್ಯಗಳಿಗೂ ಅನ್ವಯ ಆಗುತ್ತದೆ. ಹೀಗಾಗಿ ಕೋರ್ಟ್ ಈ ಕುರಿತು ಸಮಗ್ರವಾಗಿ ಪರಿಶೀಲನೆ ನಡೆಸಬೇಕು' ಎಂದು ಹಿರಿಯ ವಕೀಲ ಮುಕುಲ್ ರೊಹಟಗಿ, ಅಭಿಷೇಕ್ ಮನು ಸಿಂಘ್ವಿ, ಕಪಿಲ್ ಸಿಬಲ್ ಮನವಿ ಮಾಡಿದ್ದರು. ಇದನ್ನು ಪರಿಗಣಿಸಿದ್ದ ಸುಪ್ರೀಂಕೋರ್ಟ್ ವಿಚಾರಣೆಗೆ ಸಮ್ಮತಿ ನೀಡಿತ್ತು. ಜತೆಗೆ ಮೀಸಲಾತಿಗೆ ಶೇ. 50 ಮಿತಿ ಹೇರಬೇಕೆ ಅಥವಾ ಏರಿಕೆ ಮಾಡಬೇಕೆ ಎಂಬ ಬಗ್ಗೆ ಪ್ರತಿಕ್ರಿಯೆ ನೀಡುವಂತೆ ಎಲ್ಲ ರಾಜ್ಯಗಳಿಗೆ ನೋಟಿಸ್ ಜಾರಿ ಮಾಡಿತ್ತು.

● ನ್ಯಾಯಮೂರ್ತಿಗಳಾದ ಅಶೋಕ್ ಭೂಷಣ್, ಎಲ್ ನಾಗೇಶ್ವರ್ ರಾವ್, ಎಸ್ ಅಬ್ದುಲ್ ನಜೀರ್, ಹೇಮಂತ್ ಗುಪ್ತಾ ಮತ್ತು ರವೀಂದ್ರ ಭಟ್ ಅವರಿದ್ದ ಸಾಂವಿಧಾನಿಕ ಪೀಠ ಮೀಸಲಾತಿ ಪ್ರಕರಣವನ್ನು ನಿರಂತರವಾಗಿ ವಿಚಾರಣೆ ನಡೆಸುತ್ತಿದೆ.

● ಇಂದಿರಾ ಸಾಹಾನಿ ತೀರ್ಪಿನ ಮೂಲಕ ಶೇ.50 ಮೀಸಲಾತಿ ಮಿತಿ ನಿಗದಿಗೊಳಿಸಿರುವುದನ್ನು ಪುನರ್ ಪರಿಶೀಲಿಸುವ ಅಗತ್ಯವಿದೆ ಎಂದು ಹಿರಿಯ ವಕೀಲ ಮುಕುಲ್ ರೋಹಟ್ಗಿ ಅವರು ವಾದಿಸಿದ್ದರು.

● ಎಲ್ಲಿಯವರೆಗೆ ಮೀಸಲಾತಿ ಯೋಜನೆ ಮುಂದುವರಿಯಬೇಕು ಎಂದು ಸುಪ್ರೀಂಕೋರ್ಟ್ ಗಂಭೀರವಾಗಿ ಪ್ರಶ್ನಿಸಿತ್ತು. ಇದರಿಂದ ಉಂಟಾಗುವ ಅಸಮಾನತೆಯ ಪಾಡೇನು? ಎಷ್ಟು ತಲೆಮಾರುಗಳವರೆಗೆ ಇದು ಮುಂದುವರಿಯಲಿದೆ? ಎಂದು ನ್ಯಾಯಪೀಠ ಪ್ರಶ್ನಿಸಿತ್ತು.

● ಸ್ವಾತಂತ್ರ್ಯ ಬಂದು 70 ವರ್ಷಗಳೇ ಕಳೆದಿವೆ. ಯಾವುದೇ ಅಭಿವೃದ್ಧಿ ಕಾರ್ಯಗಳು ನಡೆದಿಲ್ಲ ಎಂಬುದನ್ನು ನಾವು ಒಪ್ಪಿಕೊಳ್ಳೋಣವೇ? ಯಾವುದೇ ಹಿಂದುಳಿದ ವರ್ಗ ಮುಂದುವರಿದಿಲ್ಲ ಎನ್ನೋಣವೇ? ಎಂದು ಪ್ರಶ್ನಿಸಿತು.

### ಯಾವ ರಾಜ್ಯದಲ್ಲಿ ಮೀಸಲಾತಿ ಎಷ್ಟಿದೆ?

| | |
|---|---|
| ಅಸ್ಸಾಂ | 51% |
| ಛತ್ತೀಸ್‌ಗಢ | 82 % |
| ಗುಜರಾತ್ | 59 % |
| ಮಹಾರಾಷ್ಟ್ರ | 75% |
| ತಮಿಳುನಾಡು | 69% |

(ಹೆಚ್ಚಿನ ರಾಜ್ಯಗಳಲ್ಲಿ ಶೇ. 50 ಮೀಸಲಾತಿ ಕಾಯ್ದುಕೊಳ್ಳಲಾಗಿದೆ)